ಒ ಎಸ್ ನಂ.290/2012
ಪಿ.ಡಬ್ಲ್ಯೂಃ 2 ಹಾಜರು

ದಿನಾಂಕಃ 18-07-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಲ್ ಎಮ್ ಎಸ್ ವಕೀಲರಿಂದಃ
**2** ರಿಂದ **5, 7** ರಿಂದ **9** ಮತ್ತು **19** ನೇ ಪ್ರತಿವಾದಿಯ ಪರವಾಗಿಃ

ಅಂಕದವರ ಕುಟಂಬದ ಮೂಲ ಊರು ಅಕ್ಕಿಸಾಗರ ಎಂದರೆ ಸರಿ. ಮೊದಲನೆ ಪ್ರತಿವಾದಿಯ ತಂದೆ ಅಕ್ಕಿಸಾಗರದಲ್ಲಿ ಶೇತ್ಕಿ ಕೆಲಸ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೊದಲನೆ ಪ್ರತಿವಾದಿಯ ತಂದೆ ಅಕ್ಕಿಸಾಗರದಿಂದ ಗೋಕಾಕಕ್ಕೆ ಬಂದ ವಿಷಯ ನನಗೆ ಗೊತ್ತಿಲ್ಲ. ಆತ ಗೋಕಾಕಕ್ಕೆ ಬಂದಾಗ ಆತನಿಗೆ ನಿಶ್ಚಿತವಾದ ಉದ್ಯೋಗ ಇರಲಿಲ್ಲ ಎಂದರೆ ಸಾಕ್ಷಿ ಅಕ್ಕಿಸಾಗರದಿಂದ ಗೋಕಾಕಕ್ಕೆ ಬಂದ ವಿಷಯ ನನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಪ್ರಶಾಂತ ಲಾಡ್ಜ ಕಟ್ಟುವ ಮೊದಲು ಅಲ್ಲಿ ಕರಿ ಹಂಚಿನ ಮನೆ ಇತ್ತು ಎಂದರೆ ಸರಿ. ಸದರಿ ಮನೆಯಲ್ಲಿಯೇ ಮೊದಲನೆ ಪ್ರತಿವಾದಿ ಮತ್ತು ಆತನ ಮಕ್ಕಳು ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಮನೆಯಲ್ಲಿ 2 ನೇ ಪ್ರತಿವಾದಿ ಐಸ್‌ಕ್ಯಾಂಡಿ ವ್ಯವಹಾರ ಪ್ರಾರಂಬಿಸಿದ್ದರು ಎಂದರೆ ಸರಿ. ಸದರಿ ಉದ್ಯೋಗ ಅಭಿವೃದ್ದಿಯಾದ ನಂತರ 2 ನೇ ಪ್ರತಿವಾದಿ ಜನತಾ ಕೊಲ್ಡ್ರಿಂಕ್ಸ ಪ್ರಾರಂಬಿಸಿದ್ದ ಎಂದರೆ ಸರಿ. 2 ನೇ ಪ್ರತಿವಾದಿಗೆ ಒಂದು ಟ್ರಕ್ ಇತ್ತು ಎಂದರೆ ನನಗೆ ಗೊತ್ತಿಲ್ಲ.

2 ನೇ ಪ್ರತಿವಾದಿ ಗಣೇಶ ಹಬ್ಬದ ಸಂದರ್ಭದಲ್ಲಿ ಪಟಾಕಿ ಮಾರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಸಂತೆ ಇರುವ ಹಳ್ಳಿಗಳಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳೆ ಬಟ್ಟೆ ವ್ಯಾಪಾರ ಪ್ರಾರಂಬಿಸಿದ್ದರು ಎಂದರೆ ಸರಿ. ಮೊದಲನೆ ಪ್ರತಿವಾದಿಯ ಎಲ್ಲಾ ಮಕ್ಕಳಿಗೆ ಈಗ ಒಂದೊಂದು ಅಂಗಡಿಗಳಿವೆ ಎಂದರೆ ಸರಿ. ಆತನ ಮಕ್ಕಳು ಯಾವ ಯಾವ ಅಂಗಡಿಗಳನ್ನು ನಡೆಸುತ್ತಾರೆ ಎಂದರೆ ಅಂಗಡಿಗಳ ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ. ದಾವಾ ಐಟೆಮ ನಂ.1 ನ್ನು ವಾದಿ ದುಂಡಪ್ಪನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಎಲ್ಲರೂ ಕೂಡಿಯೆ ಮಾರಾಟ ಮಾಡಿದ್ದಾರೆಂದು ನುಡಿದಿರುತ್ತಾರೆ. ಸದರಿ ಆಸ್ತಿಯ ಖರೀದಿ ವ್ಯವಹಾರದಲ್ಲಿ ನಾನು ಭಾಗವಹಿಸಿರಲಿಲ್ಲ. ನಾನು ಸದರಿ ಆಸ್ತಿಯ ಖರೀದಿ ಪತ್ರದ ನೊಂದಣಿ ಕಾಲಕ್ಕೆ ನೊಂದಾವಣಾಧಿಕಾರಿಗಳ ಕಚೇರಿಗೆ ಹೋಗಿದ್ದೆ.

ಸದರಿ ಆಸ್ತಿಯ ಖರೀದಿ ವ್ಯವಹಾರ ಎಷ್ಟು ಹಣಕ್ಕೆ ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಆಸ್ತಿಯನ್ನು 1 ಎಕರೆ 22 ಲಕ್ಷದಂತೆ ಖರೀದಿ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಡಿ-2 ನು ತೋರಿಸಿ ಕೇಳಿದಾಗ ತಾನು ಸದರಿ ಆಸ್ತಿಯ ಖರೀದಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದೇನೆಂದು ನುಡಿದಿರುತ್ತಾರೆ. ಸದರಿ ಸಹಿಯನ್ನು ನಿಡಿ-2 ಎ ಎಂದು ಗುರುತಿಸಲಾಯಿತು. ಸದರಿ ಆಸ್ತಿಯನ್ನು ಮಾರಾಟ ಮಾಡಿದ ಬಂದ ಹಣದಿಂದ ವಾದಿ ಯಾವ ಬ್ಯಾಂಕಿನ ಸಾಲ ತೀರಿಸಿದ ಎಂಬ ಪ್ರಶ್ನೆಗೆ ಸಾಕ್ಷಿ ಅದನ್ನು ಎಲ್ಲರೂ ಕೂಡಿಯೇ ಹಂಚಿಕೊಂಡಿದ್ದಾರೆಂದು ನುಡಿದಿರುತ್ತಾರೆ. ನಿಡಿ-2 ಆಗುವ ಕಾಲಕ್ಕೆ ಪ್ರತಿವಾದಿ ನಂ.2, 3, 7, 10, 11 ಮತ್ತು 19 ನೊಂದಾವಣಾಧಿಕಾರಿಗಳ ಕಚೇರಿಗೆ ಬಂದಿರಲಿಲ್ಲ ಎಂದರೆ ಸರಿ. ನಿಡಿ-2 ಆಗುವ ಕಾಲಕ್ಕೆ ವಾದಿ ಮತ್ತು ಸಾಕ್ಷಿದಾರರು ಮಾತ್ರ ಇದ್ದರು ಎಂದರೆ ಸರಿ. ನನ್ನ ಸಮಕ್ಷಮ

ನಿಡಿ-2 ರಲ್ಲಿ ಕಾಣಿಸಿದ ಆಸ್ತಿಯನ್ನು ಮಾರಾಟ ಮಾಡಿದ ಹಣವನ್ನು ಪ್ರತಿವಾದಿಗಳು ಹಂಚಿಕೊಂಡಿಲ್ಲ. ನಾನು ಸದರಿ ಹಣವನ್ನು ಎಲ್ಲ ಅಣ್ಣ ತಮ್ಮಂದಿರು ಹಂಚಿಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಗೋಕಾಕದಲ್ಲಿ ಕಟ್ಟಿಸಿದ ಮನೆ ಆತನ ಹೆಸರಿನಲ್ಲಿಯೇ ಇದೆ. ಪ್ರತಿವಾದಿಗಳಲ್ಲಿ ಯಾರು ಯಾರು ಮನೆಕಟ್ಟಿಸಿಕೊಂಡಿದ್ದಾರೋ ಅವುಗಳು ಅವರವರ ಹೆಸರಿನಲ್ಲಿ ಇರುತ್ತವೆ. ಮೊದಲನೆ ಪ್ರತಿವಾದಿಯ ಮಕ್ಕಳು ಮಾಡುವ ಎಲ್ಲಾ ವ್ಯವಹಾರಗಳು ಪಾಲುದಾರಿಕೆ ವ್ಯವಹಾರ ಎಂದರೆ ಸಾಕ್ಷಿ ಎಲ್ಲರೂ ಪಾಲುದಾರಿಕೆ ವ್ಯವಹಾರ ಎಂದು ನುಡಿದಿರುತ್ತಾರೆ. ಮೊದಲನೆ ಪ್ರತಿವಾದಿಯ ಮಕ್ಕಳು ತಮ್ಮ ತಮ್ಮ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಾಡಿದ ಸಾಲವನ್ನು ಅವರವರೇ ಪ್ರತ್ಯೇಕವಾಗಿ ತುಂಬಿಕೊಂಡು ಹೋಗುತ್ತಿದ್ದಾರೆ ಎಂದರೆ ಸಾಕ್ಷಿ ಎಲ್ಲರೂ ಜಂಟಿಯಾಗಿಯೇ ತುಂಬುತ್ತಿದ್ದಾರೆಂದು ನುಡಿದಿರುತ್ತಾರೆ. ವಾದಿ ಸದರಿ ವಿಷಯವನ್ನು ನನಗೆ ಹೇಳಿರುತ್ತಾನೆ. ವಾದಿ 2013 ರಲ್ಲಿ ಮನೆ ಕಟ್ಟಿಸುವ ಮೊದಲು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಎಂದರೆ ಸಾಕ್ಷಿ ಸ್ವಂತ ಮನೆಯಲ್ಲಿದ್ದ ಎಂದು ನುಡಿದಿರುತ್ತಾರೆ. ಅಂಕದವರು ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಮತ್ತು ಪ್ರತಿವಾದಿಗಳು ತಮ್ಮ ಕುಟಂಬಕ್ಕೆ ಸಂಬಂಧಿಸಿದ ಬಸಳಿಗುಂದಿಯಲ್ಲಿಯ 2 ಜಮೀನುಗಳನ್ನು ಮಾರಾಟ ಮಾಡಿ ವ್ಯಾಪಾರ ಅಭಿವೃದ್ದಿ ಪಡಿಸಿದ್ದಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎನ್ ಎಸ್ ಜಿ ವಕೀಲರಿಂದ

(ಪ್ರತಿವಾದಿ ನಂ.1 ಮತ್ತು 11 ರಿಂದ 14 ರವರ ಪರವಾಗಿ)

ಪ್ರಶಾಂತ ಲಾಡ್ಜ ಇರುವ ಜಾಗೆಯನ್ನು 1989 ರಲ್ಲಿ ಮೊದಲನೆ ಪ್ರತಿವಾದಿ ಖರೀದಿ ಮಾಡಿದ್ದ ಎಂದರೆ ಸರಿ. ಸದರಿ ಆಸ್ತಿಯನ್ನು ಆತ ತನ್ನ ಸ್ವಂತ ದುಡಿಮೆಯಿಂದ ಖರೀದಿಸಿದ್ದಾನೆ ಎಂದರೆ ಸರಿ. ಮೊದಲನೆ ಪ್ರತಿವಾದಿ ಮತ್ತು 11 ನೇ ಪ್ರತಿವಾದಿ ಸದರಿ ಜಾಗೆಯಲ್ಲಿ ಗೋಕಾಕ ಸಿಂಡಕೇಟ್ ಬ್ಯಾಂಕಿನಲ್ಲಿ ಸಾಲ ಮಾಡಿ ಪ್ರಶಾಂತ ಲಾಡ್ಜ ಕಟ್ಟಿದ್ದಾರೆ ಎಂದರೆ ಸಾಕ್ಷಿ ಎಲ್ಲರು ಕೂಡಿಯೇ ಕಟ್ಟಿದ್ದಾರೆಂದು ನುಡಿದಿರುತ್ತಾರೆ. ಆ ಬಗ್ಗೆ ನನ್ನ ಬಾಯಿ ಹೇಳಿಕೆಯನ್ನು ಬಿಟ್ಟರೆ ಬೇರೆ ದಾಖಲಾತಿಗಳು ಇರುವುದಿಲ್ಲ. ನಾನು ಮೊದಲನೆ ಪ್ರತಿವಾದಿಗೆ ಹಾಲು ಮತ್ತು ಮೊಸರನ್ನು ಮಾರಾಟ ಮಾರುವುದರಿಂದ ಆತ ನನಗೆ ಪರಿಚಯ. ನಾನು ಸದರಿ ವ್ಯವಹಾರ ಮಾಡುವ ಬಗ್ಗೆ ದಾಖಲಾತಿ ಇಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗ ಶೇತ್ಕಿ ಎಂದು ಬರೆಸಲಾಗಿದೆ ಎಂದರೆ ಸಾಕ್ಷಿ ಶೇತ್ಕಿ ಮತ್ತು ಸದರಿ ವ್ಯವಾಹರ ಮಾಡುತ್ತೇನೆಂದು ನುಡಿದಿರುತ್ತಾರೆ. ನಾನು ಯಾವತ್ತೂ ಹಾಲು ಮತು ಮೊಸರಿನ ವ್ಯಾಪಾರ ಮಾಡಿಲ್ಲ ಎಂದರೆ ಸರಿಯಲ್ಲ.

ಮೊದಲನೆ ಪ್ರತಿವಾದಿಗೆ ಮೆಳವಂಕಿಯಲ್ಲಿ ಯಾವುದೇ ಆಸ್ತಿ ಇಲ್ಲ. ಘಟಪ್ರಭಾ ನದಿಯ ದಕ್ಷಿಣಕೆ ಮೆಳವಂಕಿ ಉತ್ತರಕ್ಕೆ ಬಸಳಿಗುಂದಿ ಬರುತ್ತದೆ ಎಂದರೆ ಸರಿ. ಮೆಳವಂಕಿ ಮತ್ತು ಬಸಳಿಗುಂದಿಗೆ ನೇರವಾದ ರಸ್ತೆ ಇಲ್ಲ ಎಂದರೆ ಸರಿ. ಮೊದಲನೆ ಪ್ರತಿವಾದಿಯ ಮನೆತನದ ಕಾರ್ಯಕ್ರಮಗಳಿಗೆ ನಾನು ಬಾಗಿಯಾದ ಬಗ್ಗೆ ಯಾವುದೆ ಫೋಟೋ ಇಲ್ಲ. ಮೊದಲನೆ ಪ್ರತಿವಾದಿಯದ್ದು ಒಟ್ಟು ಕುಟುಂಬ ಇಲ್ಲ ಎಂದರೆ ಸರಿಯಲ್ಲ. ಮೊದಲನೆ ಪ್ರತಿವಾದಿಯ ಮನೆತನದ ಮಾಹಿತಿ ನನಗೆ ಇರದೇ ಇದ್ದರೂ ಅವರದ್ದು ಒಟ್ಟು ಕುಟುಂಬ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ಅಂಗಡಿಗಳು ಮೊದಲನೆ ಪ್ರತಿವಾದಿಯ ಮಕ್ಕಳ ಮಾಲ್ಕಿ ಕಬ್ಜೆಯಲ್ಲಿದೆ ಎಂದರೆ ಸಾಕ್ಷಿ ಆದರೆ ವ್ಯವಹಾರಗಳನ್ನು ಎಲ್ಲರೂ ಕೂಡಿಯೇ ಮಾಡುತ್ತಾರೆಂದು ನುಡಿದಿರತ್ತಾರೆ. ಸದರಿ ವ್ಯವಹಾರಗಳನ್ನು ಎಲ್ಲರೂ ಕೂಡಿಯೇ ಮಾಡುತ್ತಾರೆ ಎಂಬ ಬಗ್ಗೆ ದಾಖಲಾತಿಗಳನ್ನು ನೋಡಿಲ್ಲ.

ನಾನು ವರ್ಷದಲ್ಲಿ 2-3 ಬಾರಿ ಪ್ರಶಾಂತ ಲಾಡ್ಜಗೆ ಹೋಗಿರುತ್ತೇನೆ. ನಾನು ಕೊನೆಯ ಬಾರಿ 3-4 ತಿಂಗಳ ಹಿಂದೆ ಸದರಿ ಲಾಡ್ಜಗೆ ಹೋಗಿದ್ದೆ. ಪ್ರಶಾಂತ ಲಾಡ್ಜ ಬಂದ್ ಆಗಿ 4-5 ವರ್ಷವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪಾಲಿಕೆಯವರು ರಸ್ತೆ ಅಗಲೀಕರಣಕ್ಕಾಗಿ ಪ್ರಶಾಂತ ಲಾಡ್ಜನ್ನು ಅರ್ಧ ಭಾಗವನ್ನು ಹೊಡೆದು ಹಾಕಿದ್ದಾರೆ ಎಂದರೆ ಸರಿ. ಪ್ರಶಾಂತ ಲಾಡ್ಜ 4-5 ವರ್ಷಗಳಿಂದ ಬಂದ್ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಶಾಂತ ಲಾಡ್ಜನ ಉಳಿದ ಭಾಗ 11 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. 11 ನೇ ಪ್ರತಿವಾದಿ ಸದರಿ ಲಾಡ್ಜನಲ್ಲಿ ಉಳಿದ ಜಾಗೆ ಕಟ್ಟಡ ಕಟ್ಟಲು ಪರವಾನಿಗೆ ಪಡೆದುಕೊಂಡಿರಬಹುದು. ಆ ಕಾರಣಕ್ಕಾಗಿ 11 ನೇ ಪ್ರತಿವಾದಿ ಸ್ವಂತೆ ನೆಲೆಯಲ್ಲಿ ಸಾಲ ತೆಗೆದಿರಬಹುದು. ಸದರಿ ಕಟ್ಟಡದಲ್ಲಿ 11 ನೇ ಪ್ರತಿವಾದಿ ಮತ್ತು ಆತನ ಮಕ್ಕಳ ಬನಶಂಕರಿ ಮೊಬೈಲ ಅಂಗಡಿಯನ್ನು ನಡೆಸುತ್ತಾರೆ ಎಂದರೆ ಸಾಕ್ಷಿ ಎಲ್ಲ ಅಣ್ಣ ತಮ್ಮಂದಿರು ನಡೆಸುತ್ತಾರೆಂದು ನುಡಿದಿರುತ್ತಾರೆ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ 11 ನೇ ಪ್ರತಿವಾದಿ ಸರಕಾರಕ್ಕ ತೇರಿಗೆಯನ್ನು ತನ್ನ ವೈಯಕ್ತಿಕ ನಲೆಯಲ್ಲಿ ಕಟ್ಟುತ್ತಾನೆ ಎಂದರೆ ಸಾಕ್ಷಿ ಎಲ್ಲರು ಕೂಡಿಯೆ ಕಟ್ಟುತ್ತಾರೆಂದು ನುಡಿದಿರುತ್ತಾರೆ. ನಾನು ಹಾಗೆ ಎಲ್ಲರೂ ಕೂಡಿಯೇ ತೆರಿಗೆ ಕಟ್ಟುವುದನ್ನು ನೋಡಿಲ್ಲ. ಪ್ರತಿವಾದಿಗಳು ಎಲ್ಲಾ ವ್ಯವಹಾರಗಳನ್ನು ಜಂಟಿಯಾಗಿ ಮಾಡುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪದ 3 ನೇ ಪ್ಯಾರಾದಲ್ಲಿ ಹೇಳಿದ ಪ್ಲಾಟ ಮತ್ತು ಕಟ್ಟಡಗಳನ್ನು ಯಾವಾಗ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳ ನಂಬರ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಎಲ್ಲಿವೆ ಮತ್ತು ಅವುಗಳ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ಬೆಳಗಾವಿಯಲ್ಲಿರುವ ಆಸ್ತಿ ಯಾರು ಖರೀದಿ ಮಾಡಿದ್ದಾರೆ ಅದು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ.

ಈ ದಾವೆ 2011-12 ರಿಂದ ಚಾಲ್ತಿಯಲ್ಲಿರುತ್ತದೆ. ಈ ದಾವೆಯನ್ನು ಹಾಕುವ ಮೊದಲೆ ಮೊದಲನೆ ಪ್ರತಿವಾದಿಯ ಮಕ್ಕಳಲ್ಲಿ ವೈಮನಸ್ಸು ಇತ್ತು ಎಂದರೆ ಸಾಕ್ಷಿ ಹಾಗೆ ಇದ್ದುದರಿಂದಲೇ ಈ ದಾವೆ ಹಾಕಲಾಗಿದೆ ಎಂದು ನುಡಿದಿರುತ್ತಾರೆ. ಬಸಳಿಗುಂದಿಯಲ್ಲಿದ್ದ ಜಮೀನ್ನು ಎಲ್ಲರೂ ಕೂಡಿಯೆ ಮಾರಾಟ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ನ್ಯಾಯಾಲಯಕ್ಕೆ ವಾದಿ ಕರೆದುಕೊಂಡು ಬಂದಿರುತ್ತಾನೆ. ನಾನು ಆತನ ಹೇಳಿಕೆ ಮೇರೆಗ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮೊದಲನೆ

ಪ್ರತಿವಾದಿಯ ಮನೆತನದ ಯಾವುದೇ ಮಾಹಿತಿ ಇರದೇ ಇದ್ದರೂ ನಾನು ವಾದಿಯ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಮಹಾದೇವಪ್ಪ ಪತ್ತಾರ ಅಂಕದವರ ಮನೆತನದ ಹಿರಿತನ ಮಾಡಿರುತ್ತೇವೆಂದು ಸುಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಪ್ರತಿವಾದಿ ನಂ.2 ರಿಂದ 5 ನೇ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಏನೂ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ